ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 18 ನೇ ಮಾರ್ಚ್, 2020

ವಸತಿ ಸೌಲಭ್ಯಗಳ ಬಗ್ಗೆ

ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

1174(1563) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ವಸತಿ ಸೌಲಭ್ಯಗಳ ಯೋಜನೆ ಅಡಿಯಲ್ಲಿ, ಜನವರಿ-2020ರ ಅಂತ್ಯಕ್ಕೆ ರಾಜ್ಯದಲ್ಲಿ

ಬೇರೆ ಬೇರೆ ಹಂತಗಳಲ್ಲಿ ಪ್ರೋತ್ಸಾಹಧನ ಪಾವತಿಯಾಗದ

ಕಾರಣ ಆಯ್ಕೆಯಾಗಿ ಪೂರ್ಣಗೊಳಿಸಲಾಗದ ಹಾಗೂ ಪೂರ್ಣಗೊಳಿಸಿರುವ ಬೇರೆ ಬೇರೆ ಹಂತಗಳಲ್ಲಿ ಪೂರ್ಣಗೊಳ್ಳದೇ ಬಾಕಿ ಉಳಿದಿರುವ ಮನೆಗಳ ಸಂಖ್ಯೆ ಎಷ್ಟು ;

(ಆ) ತಾಂತ್ರಿಕ ದೋಷಗಳನ್ನು ಹೊರತುಪಡಿಸಿ, ಬೇರೆ ಬೇರೆ ಹಂತಗಳ ಪ್ರಗತಿಗೆ ಹಣ ಪಾವತಿಸಲು ಬಾಕಿ ಉಳಿದಿರುವ ಒಟ್ಟು ಮೊತ್ತವೆಷ್ಟು;

(ಇ) ಆಯ್ಕೆಗೊಂಡ ಫಲಾನುಭವಿಯ ಪೂರ್ವಭಾವಿ ನಿರ್ದೇಶನದ ಕೋ-ಆರ್ಡಿನೇಟ್ಸ್ ಪ್ರಗತಿ ವರದಿ ಮತ್ತು ಫೋಟೋ ಪ್ರತಿಗಳನ್ನು ತಂತ್ರಾಂಶದಲ್ಲಿ ಇಂದೀಕರಿಸಿದ್ದಾಗ್ಯೂ ಫಲಾನುಭವಿಗಳಿಗೆ ಹಣ ನಿಗಧಿತ ಅವಧಿಯಲ್ಲಿ ಪಾವತಿಸದಿರಲು ಕಾರಣಗಳೇನು ? (ವರದಿ ನೀಡುವುದು)